"ಅವರಿಗಿರುವ ಮೋಟಿವ್ ಏನು? ಕೊಲೆ ನಡೆದಾಗ ಕೊಲೆ ನಡೆದ ಜಾಗದಲ್ಲಿ ನವಮಿ ಇದ್ದರು ಎನ್ನುವುದಕ್ಕೆ ಯಾವ ಸಾಕ್ಷ್ಯ ಇಲ್ಲ. ಅವರ ಮೊಬೈಲ್ ಕೂಡಾ ಆ ಲೋಕೇಶನ್‌ನಲ್ಲಿ ತೋರಿಸುತ್ತಿಲ್ಲ. ಚೇತನ್‌ಕುಮಾರ್ ಆಫೀಸಿನಲ್ಲಿ ಕ್ಯಾಮರಾ ಇಲ್ಲ, ಸುತ್ತಮುತ್ತಲಿನವರು ನವಮಿಯನ್ನು ಅಲ್ಲಿ ನೋಡಿಲ್ಲ... ಸುತ್ತಮುತ್ತಲಿನಲ್ಲಿದ್ದ ಯಾವ ಸಿಸಿಟೀವಿ ಕ್ಯಾಮರಾದಲ್ಲಿಯೂ ನವಮಿಯ ಚಿತ್ರ ರಿಜಿಸ್ಟರ್ ಆಗಿಲ್ಲ. ಸೊ ಕಷ್ಟ ಸುರೇಶ್."

ಅದೇ ಸಮಯಕ್ಕೆ ನವಮಿಯ ಮನೆಯ ಬಳಿ ಇದ್ದ ಮಫ್ತಿಯಲ್ಲಿದ್ದ ಲೇಡಿ ಕಾನ್‌ಸ್ಟೆಬಲ್ ಬಂದು,

"ಸರ್, ನನ್ನ ಅನುಮಾನ ನಿಜ! ನವಮಿಯ ಬಲಗೈಗೆ ಗಾಯವಾಗಿದೆ. ಅವಳು ಇಂದು ಬ್ಯಾಂಡೇಜ್ ಹಾಕಿಸಿಕೊಳ್ಳಲು ಡಾಕ್ಟರ್ ಬಳಿ ಹೋಗಿದ್ದಳು. ಡಾಕ್ಟರ್ ಬಳಿ ವಿಚಾರಿಸಿದೆ, ಚಾಕುವಿನಿಂದ ಗಾಯವಾಗಿದೆ. ಒಂದು ದಿನ ತಾನೇ ಬ್ಯಾಂಡೇಜ್ ಮಾಡಿಕೊಂಡಿದ್ದೆ ಅಂತ ಹೇಳಿದ್ದಾಳೆ."

ನಾಗೇಶನ ಕಣ್ಣಲ್ಲಿ ಮಿಂಚು ತುಂಬಿತು.

"ಹೇಗಾದರೂ ಮಾಡಿ ನವಮಿಯವರ ಡಿಎನ್‌ಎ ಸ್ಯಾಂಪಲ್ ತೆಗೆದುಕೊಂಡು, ಅದನ್ನು ಕ್ರೈಂ ಸೀನ್‌ನಲ್ಲಿ ನಮಗೆ ಸಿಕ್ಕ ರಕ್ತದೊಂದಿಗೆ ಪರೀಕ್ಷೆ ಮಾಡಿದರೆ, ಅಕಸ್ಮಾತ್ ಆ ಎರಡೂ ಸ್ಯಾಂಪಲ್ ಮ್ಯಾಚ್ ಆದರೆ ನಮ್ಮ ಥಿಯರಿ ಕರಕ್ಟ್... ನವಮಿ ಕ್ರೈಂ ಸೀನ್‌ನಲ್ಲಿ ಇದ್ದರು ಅಂತಾ ಪ್ರೂವ್ ಆಗುತ್ತೆ."

"ಅವರ ರಕ್ತದ ಸ್ಯಾಂಪಲ್ ಅವರ ಅನುಮತಿಯಿಲ್ಲದೇ ಪಡೆಯಲಾಗದು ಅಲ್ವಾ ಸಾರ್..." ಸುರೇಶ್ ಕಾನೂನಿನ ತೊಡಕು ಮುಂದಿಟ್ಟ.

"ಸದ್ಯ ರೂಲ್ ಪ್ರಕಾರ ಹೋಗಲು ತೊಡಕಿದೆ, ಆದರೆ ನವಮಿಯ ಬ್ಯಾಂಡೇಜ್ ಮಾಡುವ ಡಾಕ್ಟರನ್ನು ಕನ್ವಿನ್ಸ್ ಮಾಡಿ, ಅವರಿಂದ ರಕ್ತದ ಸ್ಯಾಂಪಲ್ ತೆಗೆದುಕೊಂಡು, ಕಂಪೇರ್ ಮಾಡಿ ನೋಡಿ, ಅಕಸ್ಮಾತ್ ಮ್ಯಾಚ್ ಆದರೆ, ಅಫಿಶಿಯಲ್ ಆಗಿ ಕೋರ್ಟ್ ಆರ್ಡರ್ ಮೂಲಕ ಸ್ಯಾಂಪಲ್ ತೆಗೆದುಕೊಳ್ಳಬಹುದು."

ಸುರೇಶ ಕೊಂಚ ಭಯದಿಂದ, "ನಾಳೆ ಯಾರಾದರೂ ಮೇಲಧಿಕಾರಿಗಳಿಗೆ ಗೊತ್ತಾದರೆ?"

"ಆ ಜವಾಬ್ದಾರಿ ನನಗಿರಲಿ... ಗೋ ಅಹೆಡ್." ಎಂದ ನಾಗೇಶ್.

★★★

ಸ್ಟೇಶನ್‌ಗೆ ಕೊಂಚ ತಡವಾಗಿ ಬಂದ ನಾಗೇಶ್ ತನಗಾಗಿ ಕಾಯುತ್ತಾ ಕುಳಿತಿದ್ದ ರಾಜೇಶ್‌ನನ್ನು ಕಂಡು ಆಶ್ಚರ್ಯಚಕಿತನಾದ.

"ಏನಾಗಬೇಕಿತ್ತು?"

"ನಾನು ರಾಜೇಶ್, ನವಮಿಯ ಗಂಡ..."

"ಗೊತ್ತಿದೆ... ನನ್ನಿಂದೇನಾಗಬೇಕಿತ್ತು?"

"ನಾನು ಕೊಟ್ಟ ಸ್ಟೇಟ್‌ಮೆಂಟ್ ಬದಲಾಯಿಸಲು ಬಂದಿದ್ದೇನೆ."

ನಾಗೇಶ್ ಬೆಚ್ಚಿದ.

"ಹೌದು ಸರ್... ನಿಮ್ಮ ಆಫೀಸರ್‌ಗೆ ನಾನು ಸುಳ್ಳು ಹೇಳಿಕೆ ಕೊಟ್ಟಿದ್ದೆ. ಅದನ್ನು ಈಗ ಬದಲಾಯಿಸಿ ನಿಜ ಹೇಳಲು ಬಂದಿದ್ದೇನೆ."

"ಅಂದರೆ, ಚೇತನ್ ಕೊಲೆಯಾದ ದಿನ ನವಮಿ ನಿಮ್ಮನ್ನು ಭೇಟಿಯಾಗಲು ಬಂದಿರಲಿಲ್ಲ!"

"ನವಮಿ ಬಂದಿದ್ದಳು. ಆದರೆ ನಾಲ್ಕು ಗಂಟೆಗಲ್ಲ... ಸುಮಾರು ಆರುಗಂಟೆಗೆ. ತಾನು ಯಾವುದೋ ಅಪಾಯಕ್ಕೆ ಸಿಲುಕಿದ್ದೇನೆ, ಪೊಲೀಸರು ಕೇಳಿದರೆ ನಾಲ್ಕು ಗಂಟೆಯಿಂದ ನನ್ನ ಜೊತೆ ಇದ್ದೆ ಅಂತ ಸುಳ್ಳು ಹೇಳಿದರೆ, ಡೈವೋರ್ಸ್ ನಂತರ ಮಗಳನ್ನು ನನ್ನ ಕಸ್ಟಡಿಗೇ ಒಪ್ಪಿಸುತ್ತೇನೆ ಅಂತ ಹೇಳಿದ್ದಳು. ಅವಳೇ ಜಗಳ ಆಡೋ ನಾಟಕ ಮಾಡಿ, ನನ್ನ ಲಾಯರ್ ಕರೆಸಿ ಅಲಬೈ ಸೃಷ್ಟಿಸಿಕೊಂಡಳು."